kpeta.webly.com

ಕರ್ನಾಟಕ ಸರ್ಕಾರ
Government of Karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
**DEPARTMENT OF STATE EDUCATIONAL RESEARCH AND TRAINING**
No. 4, 100 FT RING ROAD, BANASHANKARI 3rd STAGE, BENGALURU - 560 085
Phone: 080 26980100
Fax: 080 26422377

ಸಂಖ್ಯೆ: e-6201/DSERT/PHYE/OTH/1/2022-ETC ದಿನಾಂಕ:09.06.2022

ರವರಿಗೆ,
ಮಾನ್ಯ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು -01

ಮಾನ್ಯರೇ,

ವಿಷಯ : ದೈಹಿಕ ಶಿಕ್ಷಣ ವಿಷಯವನ್ನು ಪ್ರಗತಿ ಪತ್ರದಲ್ಲಿಯಾವ ಭಾಗದಲ್ಲಿ ಪರಿಗಣಿಸಬೇಕು ಎಂಬ ಕುರಿತು ಅಭಿಪ್ರಾಯ.

ಉಲ್ಲೇಖ: 1. ತಮ್ಮಕಛೇರಿ ಪತ್ರ ಸಮ ಸಂಖ್ಯೆ:ಎಡಿಎಂ.2(1):ಶೈ.ವ.ನಿ:02:2021-22. ದಿನಾಂಕ:22.04.2022.
2. ಸರ್ಕಾರದಆದೇಶಸಂಖ್ಯೆಇಡಿ290ಎಸ್‌ಎಲ್‌ಬಿ2006, ಬೆಂಗಳೂರು , ದಿ:06.08.2007.

**************************

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ 2021-22 ನೇ ಸಾಲಿನ 1 ರಿಂದ 9ನೇ ತರಗತಿಗಳ ವಾರ್ಷಿಕ ಪರೀಕ್ಷಾ ವೇಳಾಪಟ್ಟಿಯಲ್ಲಿ 8-9 ನೇ ತರಗತಿಗಳಿರುವ ಪ್ರೌಢಶಾಲೆಗಳಲ್ಲಿ ದೈಹಿಕ ಶಿಕ್ಷಣ ವಿಷಯವನ್ನು ಭಾಗ-2 ರಲ್ಲಿ ಪರಿಗಣಿಸಿ ಪರೀಕ್ಷೆ ನಡೆಸಲು ತಿಳಿಸಲಾಗಿರುತ್ತದೆ. ಆದರೆ ಉಲ್ಲೇಖ (2)ರ ಸರ್ಕಾರಿ ಆದೇಶ ಹಾಗೂ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ರ ಮಾರ್ಗದರ್ಶನದಂತೆ ದೈಹಿಕ ಶಿಕ್ಷಣ ವಿಷಯವನ್ನು 'ಎ' ಭಾಗ ದಲ್ಲಿ ಸೇರ್ಪಡೆ ಮಾಡಿ ಕಡ್ಡಾಯ ಪರೀಕ್ಷಾವಿಷಯವನ್ನಾಗಿ ಮಾಡಲಾಗಿರುತ್ತದೆ. ಹಾಗೂ ಇದಕ್ಕೆ ಸಂಬಂಧಿಸಿದಂತೆ 2011-12, 2013-14 ಮತ್ತು 2014-15 ನೇ ಸಾಲಿನಲ್ಲಿ"ಉತ್ತುಂಗ" ಸಾಹಿತ್ಯದಡಿಯಲ್ಲಿ ರಾಜ್ಯದ ದೈಹಿಕ ಶಿಕ್ಷಣ ಶಿಕ್ಷಕರಿಗೆ ತರಬೇತಿ ನೀಡಿ, ಶಿಕ್ಷಕರ ಕೈಪಿಡಿ ನೀಡಲಾಗಿದೆ.

kpeta.weebly.com

kpeta.weebly.com

ಈ ಹಿಂದೆ ಭಾಗ-ಎ ರಲ್ಲಿ ದೈಹಿಕ ಶಿಕ್ಷಣ ವಿಷಯವನ್ನು ಸೇರಿಸಿ ಅಂಕಪಟ್ಟಿಯನ್ನು ಮುದ್ರಿಸಲಾಗಿದೆ. ಅಲ್ಲದೆ ಭಾಗ-ಎ ಮತ್ತು ಭಾಗ-ಬಿ ಯ ಮೌಲ್ಯಮಾಪನ ವಿಧಾನಗಳು ಹಾಗೂ ಅಂಕಗಳಿಗೆ ನೀಡುವ ಶ್ರೇಣಿಗಳು ಬೇರೆ ಬೇರೆಯಾಗಿರುತ್ತದೆ. ಪ್ರೊ. ಎಲ್.ಆರ್ ವೈದ್ಯನಾಥನ್ ಸಮಿತಿಯ ವರದಿಯಂತೆ ದೈಹಿಕ ಶಿಕ್ಷಣವನ್ನು 7 ನೆಯ ವಿಷಯವಾಗಿ ಪರಿಗಣಿಸಿ ಭಾಗ-ಎ ಯಲ್ಲಿ ನಿರ್ವಹಿಸಲಾಗಿದೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ತಮ್ಮ ಕಛೇರಿ ಪತ್ರ ಸಂಖ್ಯೆ:ಎಡಿಎಂ2(1) ಶೈ.ವ.ನಿ:02:2021-22. ದಿ:23.02.2022 ರ ಸುತ್ತೋಲೆಯಲ್ಲಿ ಮತ್ತು ಸ್ಯಾಟ್ಸ್ ತಂತ್ರಾಂಶದಲ್ಲಿ ಭಾಗ-ಬಿ ಯಲ್ಲಿ ಸೇರ್ಪಡೆ ಮಾಡಿರುವ ದೈಹಿಕ ಶಿಕ್ಷಣ ವಿಷಯವನ್ನು ಈ ಹಿಂದೆ ಇದ್ದಂತೆ ಭಾಗ-ಎ ಯಲ್ಲಿ ಪರಿಗಣಿಸಲು ಅಭಿಪ್ರಾಯಿಸಿ, ಏಕರೂಪದ ಆದೇಶಕ್ಕಾಗಿ ಮನವಿ ಮಾಡಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ

Signed by Sumangala V
Date: 10-06-2022 14:33:22
ನಿರ್ದೇಶಕರು
ಡಿ.ಎಸ್.ಇ.ಆರ್.ಟಿ
ಬೆಂಗಳೂರು

ಲಗತ್ತುಗಳು:-
1. ಉಲ್ಲೇಖ 2 ರ ಆದೇಶ ಪ್ರತಿ (ಅನುಬಂಧ-1,2 ಮತ್ತು3)
2. ಅಂಕ ಪಟ್ಟಿ

kpeta.weebly.com